ತಾರೀಖು 1ನೇ ಸೆಪ್ಟಂಬರ್ 1896.

ನಂ. 2421.—ರೆ. ಫೈ. 23—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ. ಎ. ಯವರಿಗೆ, 1896ನೇ ಆಗಸ್ಟ್ 28ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2432.—ರೆ. 883, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮಸ್ಟರ್ ಚಂಗಯ್ಯ ಜಟ್ಟಿಯವರಿಗೆ, 1896ನೇ ಆಗಸ್ಟ್ 27ನೇ ಮರುಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2338.—ಫಾ. ಫೈ. 90—95, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟುಗಳ ಡೆಪ್ಯುಟಿ ಕಂಜರ್‌ವೇಟರ್ ಮೆಸ್ಟರ್ ಟಿ. ಅಬ್ದುಲ್‌ಕರೀಂ ಯವರಿಗೆ, 1896ನೇ ಸೆಪ್ಟಂಬರ್ 5ನೇ ಮರುಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಎರಡು ತಿಂಗಳೂ ಏಳು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಕಡ್ಡದೇವನಕೋಟೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕಂಜರ್‌ವೇಟರ್ ಮೆಸ್ಟರ್ ಎಂ. ಜಿ. ರಾಮರಾಯರು ತಮ್ಮ ಕೆಲಸಗಳೊಂದಿಗೆ ಸದರೀ ಮೆಸ್ಟರ್ ಅಬ್ದುಲ್‌ಕರೀಂಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ ಡೆಪ್ಯುಟಿ ಕಂಜರ್‌ವೇಟರ ಆಫಿಸಿನ ಛಾರ್ಜಿನಲ್ಲಿ ಇರತಕ್ಕದ್ದು.

ತಾರೀಖು 4ನೇ ಸೆಪ್ಟಂಬರ್ 1896.

ನಂ. 2537—ರೆ. ಫೈ. 38—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಏ. ಆರ್. ತ್ಯಾಗರಾಜ ಆಯ್ಯರ್ ಯವರಿಗೆ, 1896ನೇ ಆಗಸ್ಟ್ 21ನೇ ಮರುಕ್ಕಮಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2558.—ರೆ. ಫೈ. 33—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕೆ. ಶ್ರೀನಿವಾಸರಾಯರಿಗೆ, 1896ನೇ ಆಗಸ್ಟ್ 4ನೇ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2566.—ರೆ. ಫೈ. 37—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್‌ದಾರ್ ಸಿ. ರಾಜಗೋಪಾಲಾಚಾರ್ ಯವರಿಗೆ, 1896ನೇ ಆಗಸ್ಟ್ 29ನೇ ಮರುಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ರು ಸದರೀ ತಾಲ್ಲೂಕಿನ ಅಮಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿ, ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 5ನೇ ಸೆಪ್ಟಂಬರ್ 1896.

ನಂ. 2555.—ರೆ. ಫೈ. 33—96, ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಜುಲೈ 28ನೇ ಮರುಕ್ಕಂ 1005.—ರೆ. 403ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ 15 ದಿನಗಳ ಕ್ಯಾಜುಯಲ್ ರಜಾ ಪೈಕಿ 7 ದಿನಗಳು ಮಾತ್ರ ಉಪಯೋಗಿಸಿಕೊಂಡದ್ದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ 8 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 27ನೇ ಆಗಸ್ಟ್ 1896.

ನಂ. 479.—ಬೀರೂರಿಂದ ಶಿವಮೊಗ್ಗೆಗೆ ಪುಮಾರು 38½ ಮೈಲಿಗಳ ಘಾಸಲೆ ರೈಲ್ವೇ ಲೈನು ಹಾಕುವ ಬಗ್ಯಾಗಿ ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಡುತವೆ.

2. ಮಾಡಬೇಕಾಗಿರುವ ಪ್ರತಿ ತರಹೇದ ಕಾಮುಗಾರಿಗೂ ದರಖಾಸ್ತುಗಳು "ರೇಟುಗಳ ಷೆಡ್ಯೂಲ್" ನಮೂನೆಯಲ್ಲಿ ಇರತಕ್ಕದ್ದು.

3. ಕಾಮುಗಾರಿಯು ಮೂರುಭಾಗಗಳಾಗಿಯೂ ಪೆಂಕೀಪುರದ ಹೊಸಶೇಪುವೆ ಮತ್ತು ಅವರ ಕಟ್ಟೆಗಳು ಪ್ರತ್ಯೇಕ ಕಂಟ್ರಾಕ್ಟಾಗಿಯೂ ಕೊಡಲ್ಪಡುವದು. ಸದರೀ ಕಾಮುಗಾರಿಯಲ್ಲಿ ಪರ್ಮನೆಂಟ್ ವೇ ವ ಕ್ಟೈರ್ಷ್ ಯಂತ್ರಗಳು ಹೊರತಾಗಿ ವಿಸಿಷ್ಟ ಕೆಲಸವೂ ಅಡಗಿರುವದು. ಅಪೇಕ್ಷಿಸುವ ಕಂಟ್ರಾಕ್ಟರುಗಳು ವಂದು ಭಾಗಕ್ಕೆ ಜಾಸ್ತಿಯಾಗಿ ಪ್ರತ್ಯೇಕ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

136

4. ದರಖಾಸ್ತಿನ ನಮೂನೆಗಳು ಇದರಡಿ ರುಜು ಮಾಡಿರುವವರಿಗೆ ಲಿಖಿತಮೂಲಕವಾಗಿಯಾಗಲಿ ಯಾ ರೂಬರೂ ಆಗಲಿ ಕೇಳಿ ಪಡೆಯಬಹುದು.

5. ದರಖಾಸ್ತುಗಳು 1896ನೇ ಅಕ್ಟೋಬರ್ 1ನೇ ತಾರೀಖಿನ ಮುಧ್ಯಾನ್ಹದಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಈ ಕೆಳಗೆ ರುಜು ಮಾಡಿರುವವರಿಗೆ ತಲ್ಪತಕ್ಕದ್ದು.

6. ಕಂಟ್ರಾಕ್ಟಿನ ವಿಶೇಷ ಸಂಗತಿಗಳು ಮತ್ತು ಷರತ್ತುಗಳು ಮೈಸೂರು ರೈಲ್ವೆಗಳ ಗವರ್ಣಮೆಂಟ್ ಸೆಕ್ರಿಟೆರಿಯವರ ಆಫಿಸಿನಲ್ಲಿ, ಆದಿತ್ಯವಾರಗಳು ಮತ್ತು ರಜಾ ದಿನಗಳು ಹೊರತಾಗಿ, 11 ಘಂಟೆಯಿಂದ 4 ಘಂಟೆ ವರಿಗಿನ ಮಧ್ಯೆ ಕಾಲಗಳಲ್ಲಿ ಪ್ರತಿದಿನವೂ ನೋಡಬಹುದು ಮತ್ತು ಸಮಾಚಾರ ಪಡೆಯಬಹುದು.

7. ಕಾಮುಗಾರಿಗಳ ವಿಶೇಷ ಸಂಗತಿಯ ಮತ್ತು ಕಂಟ್ರಾಕ್ಟಿನ ಷರತ್ತುಗಳ ಅಚ್ಚು ಹಾಕಲ್ಪಟ್ಟ ಪ್ರತಿಯು ಮೊದಲು ಹೇಳಿದ್ದಕ್ಕೆ ಹತ್ತು ರೂಪಾಯಿಗಳೂ ಮತ್ತು ತರುವಾಯ ಹೇಳಿದ್ದಕ್ಕೆ ಐದು ರೂಪಾಯಿಗಳೂ ತಲ್ಪಿದ ಮೇಲೆ ಕಳುಹಿಸಲ್ಪಡುವದು.

8. ಈ ಕೆಳಗೆ ರುಜು ಮಾಡಿರುವವರು ಕಮ್ಮಿಯಾದ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹಾಗೆ ಮಾಡುವದಕ್ಕೆ ಕಾರಣಗಳು ತಿಳಿಸದೇನೇ ಉಳಿಸಿಕೊಂಡಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ರೈಲ್ವೆಗಳ ಗವರ್ಣಮೆಂಟ್ ಸೆಕ್ರಿಟರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 387. ತಾರೀಖು 22ನೇ ಆಗಸ್ಟ್ 1896. ಮೊಕ್ಕಾಂ ಹರಿಹರ.

ಹರಿಹರ ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಛತ್ರ ದೇವಸ್ಥಾನಗಳಿಗೆ ಮೊದಲು ಮೊಕರರ್ರಾಡಲ್ಪಟ್ಟಿರುವ 5 ಜನ ಧರ್ಮದರ್ಶಿಗಳಲ್ಲದೆ ಹರಿಹರದಲ್ಲಿರುವ ರಾಜನಹಳ್ಳಿ ಶಾನುಭೋಗ ನಾಡಿಗ ಬಾಲಕೃಷ್ಣರಾಯರನ್ನು ಸಹ ಧರ್ಮದರ್ಶಿಯಾಗಿ ನೇಮಿಸಿ ಯಿದೆ.

ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರ್‌ಟೆಂಡೆಂಟ್ ಮತ್ತು ಸೆಕ್ರಿಟರಿ.

ಮಿ ಲಿ ಟೆ ರಿ.

ಇನ್ವಿಸ್ಟಿಹಾರ್.

ತಾರೀಖು 8ನೇ ಸೆಪ್ಟಂಬರ್ 1896.

ಘನವನ್ನು ಹೊಂದಿನ ಶ್ರೀಮತ್ ಮಹಾರಾಜ್ಞೀ-ರೀಜಂಟರವರು, ಮೆಸ್ಟರ್ ಚಾವುಪ್ಪಾಜಿ ಅರಸಿನವರಿಗೆ ಘನವನ್ನು ಹೊಂದಿದ ಶ್ರೀಮತ್ ಮಹಾರಾಜರವರ ಬಾಡೀಗಾರ್ಡ್ ಜಮಾದಾರ್‌ನ್ನಾಗಿ, 1896ನೇ ಸೆಪ್ಟಂಬರ್ ಗುರ್ರೇ ಲಾಗಾಯತು ಅಜಮಾಯಿಷೀ ತರೀಕ್ ಮೊಕರರ್ರಾಡಿರುತ್ತಾರೆ.

ಹುಕುಂ ಬಮೋಜೀಬ್,
ಏ. ಎಚ್. ಮೆಕ್ಕಿಂಟೈರ್, ಲೆಫ್ಟ್‌ನೆಂಟ್ ಕರ್ನಲ್,
ಮಿಲಿಟರಿ ಸೆಕ್ರಿಟರಿ.